**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

**<u>ಸ್ಪೆಷಲ್ ಕೇಸ್ ನಂಬ್ರ 70/2019</u>**

ಫಿರ್ಯಾದುದಾರರು ... ಪೊಲೀಸ್ ನಿರೀಕ್ಷಕರು,
ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ
ಉಡುಪಿ

- ವಿರುದ್ಧ -

ಆರೋಪಿ ... ಎಂ.ಕೆ. ವಾಸುದೇವ

**<u>ದೋಷಾರೋಪಣೆ</u>**

ಶ್ರೀ ಸುಬ್ರಮಣ್ಯ ಜೆ.ಎನ್., ಬಿ.ಎ., ಎಲ್.ಎಲ್.ಎಮ್., ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ನಾನು ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆ.

ಎಂ.ಕೆ. ವಾಸುದೇವ ,
ಪ್ರಾಯ ವರ್ಷ,
ಬಿನ್ಃ ದಿಃ ಕರಿಯ,
ವಾಸಃ 7-A, ಸಂಗಾತಿ,
ನ್ಯೂ ಕಾಲೋನಿ ರಸ್ತೆ,
ಕೊಡಂಕೂರು ಗ್ರಾಮ,
ಉಡುಪಿ ತಾಲೂಕು

*****

1) ಆರೋಪಿ ನೀವು ಉಡುಪಿ ತಾಲೂಕಿನ ಹಿರಿಯಡಕ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ಗ್ರೂಪ್ '' ಸಿ '' ವೃಂದದಲ್ಲಿ ಸರಕಾರಿ ನೌಕರನಾಗಿದ್ದುಕೊಂಡು 2017 ರ ಜೂನ್ ತಿಂಗಳಲ್ಲಿ ತಮ್ಮ ಶಾಲೆಯ 396

ಮಕ್ಕಳಿಗೆ ರೂ 1,09,920/- (ಒಂದು ಲಕ್ಷದ ಒಂಭತ್ತು ಸಾವಿರದ ಒಂಭೈನೂರ ಇಪ್ಪತು) ಮೌಲ್ಯದ ಶೂ ಮತ್ತು ಸಾಕ್ಸ್ ಗಳನ್ನು ಉಡುಪಿ ತಾಲೂಕಿನ ಮಣಿಪಾಲ ಎಂಬಲ್ಲಿರುವ ಚಾಸಾ 1 ನೇ ಪ್ರಶಾಂತ್ ರವರ '' ಶೂ ಜೋನ್ '' ಪಾದರಕ್ಷೆ ಮಳಿಗೆಯಿಂದ ಖರೀದಿ ಮಾಡಿ, ಚಾಸಾ 1 ನೇಯವರಿಗೆ 1,09,920/- (ಒಂದು ಲಕ್ಷದ ಒಂಭತ್ತು ಸಾವಿರದ ಒಂಭೈನೂರ ಇಪ್ಪತು) ರೂಪಾಯಿಗಳನ್ನು ಪಾವತಿ ಮಾಡಲು ನೀವು ಒಟ್ಟು ಮೊತ್ತದ 10% ಮೊತ್ತವನ್ನು ಕಮಿಷನ್ ನೀಡುವಂತೆ ಒತ್ತಾಯಿಸಿದ್ದು, ದಿನಾಂಕ 15-03-2018 ರಂದು ನೀವು ಚಾಸಾ 1 ನೇಯವರಿಗೆ ಕರೆ ಮಾಡಿ ರೂಃ 10,000/- (ಹತ್ತು ಸಾವಿರ) ನೀಡುವಂತೆ ಲಂಚದ ಹಣ ಬೇಡಿಕೆ ಇರಿಸಿ, ಅಷ್ಟು ಕೊಡಲು ಕಷ್ಟವಾಗುತ್ತದೆ ಎಂದು ಹೇಳಿದಾಗ ರೂಃ 7,000/-(ಏಳು ಸಾವಿರ) ಕೊಡುವಂತೆ ಬೇಡಿಕೆ ಸಲ್ಲಿಸಿ ಭ್ರಷ್ಟಾಚಾರ ತಡೆ ಕಾಯ್ದೆ ಕಲಂ 7 ರನ್ವಯ ದಂಡಿಸಲ್ಪಡುವ ಅಪರಾಧ ಎಸಗಿರುತ್ತೀರಿ.

2) ಆರೋಪಿ ನೀವು ಉಡುಪಿ ತಾಲೂಕಿನ ಹಿರಿಯಡಕ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ಗ್ರೂಪ್ '' ಸಿ '' ವೃಂದದಲ್ಲಿ ಸರಕಾರಿ ನೌಕರನಾಗಿದ್ದುಕೊಂಡು 2017 ರ ಜೂನ್ ತಿಂಗಳಲ್ಲಿ ತಮ್ಮ ಶಾಲೆಯ 396 ಮಕ್ಕಳಿಗೆ ರೂ 1,09,920/- (ಒಂದು ಲಕ್ಷದ ಒಂಭತ್ತು ಸಾವಿರದ ಒಂಭೈನೂರ ಇಪ್ಪತು) ಮೌಲ್ಯದ ಶೂ ಮತ್ತು ಸಾಕ್ಸ್ ಗಳನ್ನು ಉಡುಪಿ ತಾಲೂಕಿನ ಮಣಿಪಾಲ ಎಂಬಲ್ಲಿರುವ ಚಾಸಾ 1 ನೇ ಪ್ರಶಾಂತ್ ರವರ '' ಶೂ ಜೋನ್ '' ಪಾದರಕ್ಷೆ ಮಳಿಗೆಯಿಂದ ಖರೀದಿ ಮಾಡಿ, ಚಾಸಾ 1 ನೇಯವರಿಗೆ 1,09,920/- (ಒಂದು ಲಕ್ಷದ ಒಂಭತ್ತು ಸಾವಿರದ ಒಂಭೈನೂರ ಇಪ್ಪತು) ರೂಪಾಯಿಗಳನ್ನು ಪಾವತಿ ಮಾಡಲು ನೀವು ಒಟ್ಟು ಮೊತ್ತದ 10% ಮೊತ್ತವನ್ನು ಕಮಿಷನ್ ನೀಡುವಂತೆ ಒತ್ತಾಯಿಸಿದ್ದು, ದಿನಾಂಕ 15-03-2018 ರಂದು ನೀವು ಚಾಸಾ 1 ನೇಯವರಿಗೆ ಕರೆ ಮಾಡಿ ರೂಃ 10,000/- (ಹತ್ತು ಸಾವಿರ) ಲಂಚದ ಹಣ ನೀಡುವಂತೆ ಬೇಡಿಕೆ ಇರಿಸಿ, ಅಷ್ಟು ಕೊಡಲು ಕಷ್ಟವಾಗುತ್ತದೆ ಎಂದು ಹೇಳಿದಾಗ ರೂಃ 7,000/-(ಏಳು ಸಾವಿರ) ಕೊಡುವಂತೆ ಬೇಡಿಕೆ ಸಲ್ಲಿಸಿ, ದಿನಾಂಕ 17-03-2018 ರಂದು ನೀವು ಚಾಸಾ

1 ನೇದವರಿಂದ ತಮ್ಮ ಶಾಲೆಯ ಮುಖ್ಯೋಪಾಧ್ಯಾಯರ ಕೊಠಡಿಯಲ್ಲಿ ರೂಃ 7,000/-(ಏಳು ಸಾವಿರ) ಲಂಚದ ಹಣವನ್ನು ಪಡೆದುಕೊಂಡು ಭ್ರಷ್ಟಾಚಾರ ತಡೆ ಕಾಯ್ದೆ ಕಲಂ 13 (1) (ಡಿ) ಸಹ ಕಲಂ 13 (2) ರನ್ವಯ ದಂಡಿಸಲ್ಪಡುವ ಅಪರಾಧ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 12 ನೇ ನವಂಬರ್ ತಿಂಗಳು 2021

(ಸುಬ್ರಮಣ್ಯ ಜೆ.ಎನ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ